ಅಲೆಗ್ಸಾಂಡರ್ ಬಹಳವಾಗಿ ನೆನಪಾದ. ಏನು ಮಾಡುತ್ತಿರುವನೋ ಈಗ? ಆಗಲೇ ವ್ಯಾಪಾರದಲ್ಲಿ ತನ್ನ ತಂದೆಗೆ ಅಸಿಸ್ಟ್ ಮಾಡುತ್ತಿರುವುದಾಗಿ ಅಂಜಲಿ ದೇಸಾಯಿ ಹೇಳಿದ್ದಳಲ್ಲ. ಈಗ ಅವನು ತನ್ನ ಕೈಗೆ ಸಿಕ್ಕಿದರೆ ಮಜಾ ಇರುತ್ತದೆ. ನಾಗ್ಪಾಡೇ ಏನು, ಇಡೀ ಮುಂಬಯಿಯನ್ನು ಅವನ ಜೊತೆಯಲ್ಲಿ ಸುತ್ತಬಹುದು. ತನ್ನನ್ನು ಅವನೇನು ಮರೆಯಲು ಸಾಧ್ಯವಿರಲಿಕ್ಕಿಲ್ಲ. ಏನಾದರಾಗಲೀ ನಾಗ್ಪಾಡಿಗೆ ಹೋಗಿ ಅವನನ್ನು ಪತ್ತೆ ಹಚ್ಚಬೇಕು. ತಾತ ಗುನ್ನಾಲಾಲನಿಗೆ ಹೇಳಿದರೆ ಅಲೆಗ್ಸಾಂಡರನನ್ನೇ ತಾನಿರುವಲ್ಲಿಗೆ ಕರೆಸಬಲ್ಲ. ಆದರೆ ತಾತನಿಗೆ ತಿಳಿಯದಂತೆ ನಾಗ್ಪಾಡ್ ನೋಡಬೇಕು; ಧಾರಾವಿಯನ್ನೂ ನೋಡಬೇಕು. ಹೀಗೆ ನಿರ್ಧರಿಸಿದ ಎರಡನೆಯ ದಿನವೇ ಆಸ್ಕರ್ ವೈಲ್ಡ್ ಕಾರು ಹತ್ತಿ ಕಾಲೇಜಿನ ಬಳಿ ಡ್ರಾಪ್ ತೆಗೆದುಕೊಂಡು ಬರುವಾಗ ಸ್ನೇಹಿತನ ಕಾರಿನಲ್ಲಿ ಮನೆಗೆ ಬರುವುದಾಗಿ ಡ್ರೈವರ್‌ಗೆ ಹೇಳಿ ಕಾರನ್ನು ಮನೆಗೆ ಕಳಿಸಿದ್ದ. ಕಾರು ಮರೆಯಾಗುತ್ತಿದ್ದಂತೆ ಟ್ಯಾಕ್ಸಿ ಹತ್ತಿ ನಾಗ್ಪಾಡ್ ಅಂದಿದ್ದ. ಅರ್ಧ ಗಂಟೆಯಲ್ಲಿ ಟ್ಯಾಕ್ಸಿ ನಾಗ್ಪಾಡಿಗೆ ಬಂದಿತ್ತು.

ಟ್ಯಾಕ್ಸಿ ಡ್ರೈವರನನ್ನು ಕುರಿತು ಆಸ್ಕರ್ ವೈಲ್ಡ್ – 'ಭಯ್ಯಾ ನಾಗ್ಪಾಡಿನಲ್ಲಿ ದೊಡ್ಡ ಹೋಲ್‌ಸೇಲ್ ಕಾಂಡೋಮ್ ಮರ್ಚೆಂಟ್ ಯಾರು? ನಿಮಗೇನಾದರೂ ತಿಳಿದಿದೆಯಾ?' ಎಂದು ಕೇಳಿದ್ದ. ಸುಮಾರು ಐವತ್ತು ವರ್ಷಗಳನ್ನು ಮೀರಿದ್ದ ಡ್ರೈವರ್ ಒಮ್ಮೆ ವೈಲ್ಡ್‌ನನ್ನು ದಿಟ್ಟಿಸಿ ನೋಡಿ 'ಕಾಮಾಟಿಪುರದಲ್ಲಿ ಎಲ್ಲಾ ರಂಡೆಯರ ಹತ್ತಿರಾನೂ ಕಾಂಡೋಮ್ಸ್ ಇದ್ದೇ ಇರ್ತಾವೆ. ಅವುಗಳ ಮೇಲೆ ಡಬ್ಬಲ್ ರೇಟನ್ನು ಗಿರಾಕಿಗಳ ಮೇಲೆಯೇ ಹಾಕುತ್ತಾರೆ ಚಿನಾಲಿಯರು. ಇನ್ನು ಎಲ್ಲಾ ಚಿಲ್ಲರೆ ಅಂಗಡಿಗಳಲ್ಲೂ ಚಾಕೊಲೇಟ್ ಮಾರುವಂತೆ ಮಾರುತ್ತಾರೆ. ಏಕೆ, ಏನಾದರೂ ಕಾಂಡೋಮ್‌ಗಳ ಚಿಲ್ಲರೆ ಅಂಗಡಿ ಇಡ್ಬೇಕು ಅಂತ ಇದ್ದೀಯಾ?' ಡ್ರೈವರ್ ಆಸ್ಕರ್ ವೈಲ್ಡನ ವಯಸ್ಸನ್ನು ಮನದಲ್ಲಿಟ್ಟುಕೊಂಡು ಹೇಳಿದ್ದ.

'ನನ್ನ ಫ್ರೆಂಡ್ ಮಾಥ್ಯೂ ಅಲೆಗ್ಸಾಂಡರ್ ಅವರ ಅಪ್ಪ ಇಲ್ಲಿಯ ದೊಡ್ಡ ಕಾಂಡೋಮ್ ಡೀಲರ್ ಅಂತೆ. ಅಲೆಗ್ಸಾಂಡರ್ ಹೈಸ್ಕೂಲಿನಲ್ಲಿ ನನ್ನ ಕ್ಲಾಸ್‌ಮೇಟ್ ಆಗಿದ್ದವನು. ಅವನನ್ನು ನೋಡಿ ಮೂರು ವರ್ಷಗಳ ಮೇಲಾಯಿತು. ಅರ್ಜೆಂಟ್ ನೋಡಲು ಬಂದೆ. ಅವನ ಅಡ್ರೆಸ್ ಗೊತ್ತಿಲ್ಲ. ಹಾಗಾಗಿ ನಿಮ್ಮನ್ನು ಕೇಳಿದೆ' ತಾನೊಬ್ಬ ದೊಡ್ಡ ಬಿಸಿನೆಸ್ ಮ್ಯಾಗ್ನೆಟ್ ಮೊಮ್ಮಗನೆಂಬ ಯಾವ ಹಮ್ಮು ಬಿಮ್ಮನ್ನು ಟ್ಯಾಕ್ಸಿ ಡ್ರೈವರ್ ಬಳಿ ತೋರಿಸದೆ ಸೌಮ್ಯವಾಗಿ ಹೇಳಿದ್ದ ವೈಲ್ಡ್.

'ಓಹ್ ಸಾರಿ, ನೀನೆಲ್ಲೊ ಕಾಮಾಟಿಪುರಕ್ಕೆ ಹೊರಟಿರಬೇಕೆಂದುಕೊಂಡೆ. ಆ ಬಗ್ಗೆ ಎನ್‌ಕ್ವಯರಿ ಮಾಡ್ತೀನಿ. ಆದರೆ ಒಂದೈವತ್ತು ಜಾಸ್ತಿ ಕೊಡ್ಬೇಕು ನೋಡು' ಡ್ರೈವರ್ ಡಿಮ್ಯಾಂಡ್ ಇಟ್ಟಿದ್ದ.

'ಆಯ್ತು ನೂರೇ ಕೊಡ್ತೀನಿ' ಆಸ್ಕರ್ ವೈಲ್ಡ್ ಉದಾರತೆಯನ್ನು ತೋರಿದ್ದ. ಡ್ರೈವರ್ ಟ್ಯಾಕ್ಸಿಯನ್ನು ರಸ್ತೆಯ ಪಕ್ಕಕ್ಕೆ ಹಾಕಿ ಅಂಗಡಿಯೊಂದರ ಬಳಿ ಹೋಗಿ, ಅಂಗಡಿಯಾತನೊಂದಿಗೆ ಎರಡು ನಿಮಿಷ ಮಾತಾಡಿ ಬಂದು ತನ್ನ ಸೀಟಿನಲ್ಲಿ ಕುಳಿತು 'ಆಂ, ಪಕ್ಕದ ಡೊಂಗ್ರಿಯಲ್ಲಿ ಮ್ಯಾಥ್ಯೂ ಫರ್ನಾಂಡಿಸ್ ಅಂತ ಒಬ್ಬ ಡೀಲರ್ ಇದಾನಂತೆ. ಇಲ್ಲಿಗೆ ಅರ್ಧ ಕಿಲೋಮೀಟರ್ ಆಗ್ತದೆ. ಈ ಏರಿಯಾದಲ್ಲಿ ಸ್ವಲ್ಪ ದಾದಾಗಿರಿ ಕೂಡ ಇದೆಯಂತೆ ಅವಂದು. ಬಹುಶಃ ನಿನ್ನ ಫ್ರೆಂಡ್ ಮ್ಯಾಥ್ಯೂ ಅಲೆಗ್ಸಾಂಡರ್ ಅವನ ಮಗನೇ ಇರಬೇಕು. ಮುಂಬಯಿಯ ಬಹುತೇಕ ಡಾನುಗಳು ಇಲ್ಲೇ ಮೆರೆದದ್ದು. ಈ ರೌಡಿಗಳು ಮತ್ತು ಪೊಲೀಸರು ಅಣ್ಣ ತಮ್ಮಂದಿರೇ ಸೈ. ಕಾಂಡೋಮ್‌ಗಳನ್ನು ಕಾಳಸಂತೆಯಲ್ಲಿ ಮಾರುತ್ತಾರಂತೆ. ಹೆಲ್ತ್ ಡಿಪಾರ್ಟ್ಮೆಂಟಿನ ಅಧಿಕಾರಿಗಳು ಮೂರು ತಿಂಗಳ ಹಿಂದೆ ರೈಡ್ ಮಾಡಿ ಟನ್‌ಗಟ್ಟಲೆ ಯೂಸ್ಡ್ ಕಾಂಡೋಮ್‌ಗಳನ್ನು ರೀಸೈಕಲ್ ಮಾಡುತ್ತಿದ್ದದ್ದನ್ನು ಹಿಡಿದು ಹಾಕಿದ್ರು. ಆಮೇಲೇನಾಯ್ತು? ಅದು ಹಾಗೆ ಮುಚ್ಕೋಯ್ತು. ಈ ಹೆಲ್ತ್ ಡಿಪೋರ್ಟ್ಮೆಂಟ್ನೋರೂ ಹರಾಮಿಗ್ಳು' ಎಂದು ಮಾತನಾಡುತ್ತಲೇ ಡ್ರೈವ್ ಮಾಡುತ್ತಿದ್ದವನು ಆರೇಳು ನಿಮಿಷದಲ್ಲಿ ಡೊಂಗ್ರಿಯ ಮೈನ್ ರೋಡಿನ ಹಳೆಯ ದೊಡ್ಡ ಕಟ್ಟಡವೊಂದರ ಮುಂದೆ ಟ್ಯಾಕ್ಸಿ ನಿಲ್ಲಿಸಿದ್ದ.

ಎಂಎಫ್ ಅಂಡ್ ಎಂಎ ಎಂಟರ್‌ಪ್ರೈಸಸ್ ಎಂಬ ದೊಡ್ಡ ಬೋರ್ಡ್ ಇತ್ತು. ಡ್ರೈವರ್ ಇಳಿದು ಹೋಗಿ ವಿಚಾರಿಸಿಕೊಂಡು ಬಂದು ಸರಿಯಾದ ಅಡ್ರೆಸ್ಸಿಗೆ ಬಂದಿರುವುದಾಗಿ ಹೇಳಿದ್ದ. ಆಸ್ಕರ್ ವೈಲ್ಡ್ ಐನೂರು ರೂಪಾಯಿಯ ನೋಟನ್ನು ಡ್ರೈವರ್ ಕೈಗೆ ಕೊಟ್ಟು ಮಿಕ್ಕ ಚಿಲ್ಲರೆಯನ್ನು ಇಟ್ಟುಕೊಳ್ಳಲು ಹೇಳಿದ್ದ. ತುಂಬಾ ಖುಷಿಯಿಂದ ನಗುತ್ತಾ, 'ಈ ಬಿಲ್ಡಿಂಗ್ ನೋಡಿದರೆ ಇವರು ಕೇವಲ ಕಾಂಡೋಮ್ ವ್ಯಾಪಾರಿಗಳಂತೆ ಕಾಣುವುದಿಲ್ಲ. ಕಾಂಡೋಮ್ ವ್ಯಾಪಾರದ ನೆಪದಲ್ಲಿ ಗ್ಯಾರಂಟಿ ಇಲ್ಲಿ ಬೇರೇನೋ ಸರಕುಗಳ ಸ್ಮಗ್ಲಿಂಗ್ ದಂಧೆ ನಡೆಯುತ್ತಿದೆ ಅನ್ನಿಸುತ್ತದೆ. ದೊಡ್ಡವರ ರೀತಿ ರಿವಾಜುಗಳ ತಂಟೆ ನಮಗ್ಯಾಕೆ ಇದ್ದೀತು ಬಿಡಿ' ಎಂದು ಟ್ಯಾಕ್ಸಿಯೊಂದಿಗೆ ಜಾಗ ಖಾಲಿ ಮಾಡಿದ್ದ. ಆಸ್ಕರ್ ವೈಲ್ಡ್ ಎತ್ತರದ ದೊಡ್ಡ ಗೇಟಿನ ಮುಂದೆ ನಿಂತು ಗೇಟಿನ ಪಕ್ಕ ಕಾಂಪೌಂಡಿಗೆ ಹಾಕಿದ್ದ ಕಾಲಿಂಗ್ ಬೆಲ್ಲನ್ನು ಒತ್ತಿದ್ದ. ಐದು ನಿಮಿಷದಲ್ಲಿ ಎತ್ತರದ ವ್ಯಕ್ತಿಯೊಬ್ಬ ಗೇಟನ್ನು ಸ್ವಲ್ಪ ಓರೆ ಮಾಡಿ ಏನೆಂದು ವಿಚಾರಿಸಿದ್ದ. ಆಸ್ಕರ್ ವೈಲ್ಡ್ ತನ್ನ ವಿಷಯ ತಿಳಿಸಿ ಅಲೆಗ್ಸಾಂಡರನನ್ನು ಭೇಟಿಯಾಗಲು ಬಂದಿರುವುದಾಗಿ ತಿಳಿಸಿದ್ದ. ಆ ವ್ಯಕ್ತಿ ಗೇಟ್ ತೆಗೆದು ಆಸ್ಕರ್ ವೈಲ್ಡನನ್ನು ಹೊರಗಿನ ವಿಶಾಲವಾದ ವರಾಂಡದ ಸೋಫಾ ಮೇಲೆ ಕುಳ್ಳಿರಿಸಿ ಒಳ ಹೋದ. ಐದು ನಿಮಿಷಗಳ ಬಳಿಕ ಮಾಥ್ಯೂ ಅಲೆಗ್ಸಾಂಡರ್ ಒಳಗಿನಿಂದ ಬಂದಿದ್ದ. ಅದೇ ಸ್ಟೈಲ್, ಅದೇ ನಗು.

'ವ್ಹಾಟ್ ಎ ಸರ್‌ಪ್ರೈಸ್ ಸೋನಾ. ಏನು ಬಂದದ್ದು? ಮುಂಬಯಿ ಒಂದು ದೊಡ್ಡ ಪ್ರಪಂಚ ಇದ್ದಂತೆ. ಕೆಲವರು ಒಮ್ಮೆ ಭೇಟಿಯಾದರೆ ಜೀವಮಾನದಲ್ಲಿ ಮತ್ತೆ ಭೇಟಿಯಾಗುವುದಿಲ್ಲ. ಕೆಲವರು ಮತ್ತೆ ಮತ್ತೆ ಭೇಟಿಯಾಗುತ್ತಿರುತ್ತಾರೆ' ಎಂದು ಆಸ್ಕರ್ ವೈಲ್ಡ್‌ನ ಪಕ್ಕದಲ್ಲಿ ಕುಳಿತಿದ್ದ.

'ಹೀಗೆ ನೋಡಬೇಕು ಅನ್ನಿಸ್ತು ಬಂದುಬಿಟ್ಟೆ. ಅಂದ ಹಾಗೆ ನಾನು ನನ್ನ ಹೆಸರನ್ನು ಆಸ್ಕರ್ ವೈಲ್ಡ್ ಅಂತ ಬದಲಾಯಿಸಿಕೊಂಡಿದ್ದೀನಿ. ನಾಗ್ಪಾಡ್‌ನಲ್ಲಿ ಮಜಾ ಇರ್ತದೆ ಅಂತ ಹೇಳಿದ್ದಲ್ಲ, ನೋಡೋಣ ಅಂತ ಬಂದೆ. ಜೊತೆಗೆ ಕಾಮಾಟಿಪುರ ಹಾಗೂ ಧಾರಾವಿಗಳನ್ನೂ ನೋಡಬೇಕು' ಗಂಭೀರವಾಗಿಯೇ ಹೇಳಿದ್ದ.

'ಓಹ್, ಯಾವಾಗ ಕ್ರಿಶ್ಚಿಯಾನಿಟಿಗೆ ಕನ್ವರ್ಟ್ ಆದೊ' ಆಸ್ಕರ್ ವೈಲ್ಡನ ಭುಜವನ್ನು ಮೆಲ್ಲನೆ ಕೈಯಿಂದ ತಿವಿದು ಕೇಳಿದ್ದ.

'ನಾನೇನೂ ಕ್ರಿಶ್ಚಿಯಾನಿಟಿಗೆ ಕನ್ವರ್ಟ್ ಆಗಲಿಲ್ಲ. ಅದೊಂದು ದೊಡ್ಡ ಕಥೆ, ಬಿಡು ಅದು ಈಗ ಬೇಡ' ಎಂದಿದ್ದ ಆಸ್ಕರ್ ವೈಲ್ಡ್.

'ಆಂ, ಮರೆತಿದ್ದೆ ನೋಡು, ನಿನಗೆ ನಿಜಕ್ಕೂ ಥ್ಯಾಂಕ್ಸ್ ಹೇಳ್ಬೇಕು ನಾನು. ಮೂರು ವರ್ಷಗಳ ಹಿಂದೆ ಅಚಾನಕ್ಕಾಗಿ ಗ್ರಾಂಟ್ ರೋಡಿನಲ್ಲಿ ಅಂಜಲಿ ದೇಸಾಯಿ ಸಿಕ್ಕಿದ್ದಳು. ತುಂಬಾ ಫ್ರಸ್ಟ್ರೇಟ್ ಆಗಿದ್ದಳು. ಅವತ್ತು ಅವಳ ಜೊತೆ ನೀನು ಪೂನಾಕ್ಕೆ ಹೋಗುವುದಾಗಿ ಹೇಳಿ ಕೈಕೊಟ್ಟಿದ್ದೆಯಂತೆ. ನನ್ನನ್ನು ಕರೆದಳು. ನಾನು ಖುಷಿಯಿಂದ ಹೋದೆ. ಎಂಥಾ ಅವಕಾಶ ಮಿಸ್ ಮಾಡ್ಕೊಂಡೆ ನೀನು ಗೊತ್ತಾ. ಅದೊಂದು ಎವರ್ ಗ್ರೀನ್ ಮಾರ್ವೆಲಸ್ ಎಕ್ಸ್‌ಪೀರಿಯೆನ್ಸ್. ನನ್ನನ್ನೂ ಮದುವೆಗೆ ಕರೆದಿದ್ದಳು. ನಾನೇನು ಹೋಗಲಿಲ್ಲ. ಲಂಡನ್‌ನಲ್ಲಿ ಸೆಟ್ಲ್ ಆಗಿದಾಳಂತೆ' ಅಲೆಗ್ಸಾಂಡರನ ಮಾತುಗಳು ಆಸ್ಕರ್ ವೈಲ್ಡನನ್ನು ಸ್ವಲ್ಪ ಗಾಸಿಗೊಳಿಸಿದ್ದವು. ಅಷ್ಟರಲ್ಲಿ ಬಿಸಿ ಬಿಸಿ ಬಾದಾಮ್ ಹಲ್ವ ಬಂದಿತ್ತು. ತಾನೂ ಒಂದು ಸ್ಪೂನ್ ಹಲ್ವ ಬಾಯಿಗಿಟ್ಟುಕೊಂಡು, 'ಇನ್ನರ್ಧ ಗಂಟೆ ಆಗಿದ್ರೆ ಸಿಗ್ತಿರ್ಲಿಲ್ಲ ನಾನು. ಬೀವಂಡಿಗೆ ಹೋಗಿಬಿಡ್ತಿದ್ದೆ. ನಾಲ್ಕು ತಿಂಗಳ ಹಿಂದೆ ಬೀವಂಡಿಯಲ್ಲಿ ಒಂದು ಡ್ಯಾನ್ಸ್ ಬಾರನ್ನು ಪರ್ಚೇಸ್ ಮಾಡಿದ್ವಿ. ಬಿಸಿನೆಸ್ ಫೈನಾಗಿದೆ. ಸದ್ಯ ಅಕ್ಕನ ಗಂಡ ನೋಡ್ಕೋತಾ ಇದಾನೆ. ಅಪ್ಪನ ಜೊತೆ ಹೋಗಿ ಇವತ್ತು ಎಸಿಪಿನ ನೋಡೋದಿತ್ತು. ರಾತ್ರಿ ಎಂಟು ಗಂಟೆಯ ಮೇಲೆ ಭೇಟಿಯಾಗ್ತೀನಿ. ಸದ್ಯ ಇವತ್ತು ಸಂಜೆಯವರೆಗೂ ನಿಂಗೆ ಕಾಮಾಟಿಪುರನ ತೋರಿಸ್ತೀನಿ' ಎಂದು ಉತ್ಸಾಹ ತೋರಿದ್ದ.

ಓಹ್! ತನ್ನ ಜೀವಮಾನದಲ್ಲಿ ಅಂಥ ನತದೃಷ್ಟ ದೃಶ್ಯಗಳನ್ನು ಆಸ್ಕರ್ ವೈಲ್ಡ್ ಕಂಡಿರಲಿಲ್ಲ. ಇಲ್ಲಿ ಮನುಷ್ಯರು ಏಕೆ ಬದುಕುತ್ತಿದ್ದಾರೆ? ಹೇಗೆ ಬದುಕುತ್ತಿದ್ದಾರೆ? ಎಂಬ ಬೃಹತ್ ಪ್ರಶ್ನೆಯೊಂದು ಅವನ ಮನದಲ್ಲಿ ಬೃಹದಾಕಾರವಾಗಿ ಮೂಡಿತ್ತು. ಇಂಥ ಒಂದು ಜಾಗದಲ್ಲಿ ಡಾಕ್ಟರ್ ಮನೋರಂಜನಿಯವರು ಜನ್ಮ ತಾಳಿದ್ದು ನಿಜವೆ? ಕೇವಲ ಅನ್ನ ಮತ್ತು ಬಟ್ಟೆಗಾಗಿ ಮನುಷ್ಯ ಹೀಗೆ ಬದುಕಬೇಕೆ? ನಯ ನಾಜೂಕಿಲ್ಲದ, ಸ್ವಚ್ಛತೆಯಿಲ್ಲದ ಹಳೆಯ ಬಿಲ್ಡಿಂಗುಗಳು. ಸಣ್ಣ ಸಣ್ಣ ಗೂಡುಗಳಂತಿರುವ ಮನೆಗಳು. ಅಲ್ಲೇ ದಂಧೆ ನಡೆಸುತ್ತಿರುವ ಹೆಂಗಸರು. ಚಿಕ್ಕ ಮಕ್ಕಳನ್ನು ಆಡಿಸುತ್ತಿರುವ ವಯಸ್ಸಾದ ಹೆಂಗಸರು. ರಸ್ತೆ ತುಂಬಾ ಓಡಾಡುತ್ತಿರುವ ಜನ. ಇವೆಲ್ಲಾ ಏನೂ ಅಲ್ಲವೆಂಬಂತೆ ವ್ಯಾಪಾರದಲ್ಲಿ ತಲ್ಲೀನರಾಗಿರುವ ಅಂಗಡಿಗಳ ಮಾಲೀಕರು ಮತ್ತು ಗಿರಾಕಿಗಳು. ಜನರನ್ನು ಇಳಿಸುವುದು,